ಯನ್ನು ಕೊಟ್ಟಿದ್ದರು, ಆ ಹೈಕಿ 6 ಜನಗಳಿಗೆ 3 ಸಾವಿರ ರೂಪಾಯಿಗಳಿಂದ 60 ಸಾವಿರ ರೂಪಾಯಿಗಳವರೆಗೆ ಅವರಿಗೆ ಸಾಲವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಉಳಿದವರಿಗೆ ಸೆಕ್ಯೂರಿಟಿ ಅಡಿಕ್ವೇಟ್ ಆಗಿಲ್ಲ ಎಂದು ಸಾಲದ ಸೌಲತ್ತು ಸಿಕ್ಕಲಿಲ್ಲವೇ ಅಥವಾ ಯಾವ ಕಾರಣದಿಂದ ಅವರಿಗೆ ಸಾಲದ ಸೌಲತ್ತು ಸಿಕ್ಕಲಿಲ್ಲ ?

ಶ್ರೀ ಕೆ. ಮಲ್ಲಪ್ಪ.—ಅದರಲ್ಲಿ 3 ಕಾರಣಗಳಿವೆ. ಒಂದನೆಯದು ವರ್ಕಿಂಗ್ ಕ್ಯಾಪಿಟಲ್ ಕಾಸ್ಟ್. ಪ್ರತಿ ನಿತ್ಯ ಕೆಲಸ ಮಾಡುವುದಕ್ಕೆ ದುಡ್ಡು ಕೊಟ್ಟು ಸಾಮಾನ್ಯವಾಗಿ ವರ್ಕಿಂಗ್ ಕ್ಯಾಪಿಟಲ್ ಕೊಡುವುದಿಲ್ಲ. ಕೈಗಾರಿಕೆಯನ್ನು ನಡೆಸುವುದಾದರೆ ಮೂಲ ಕ್ಯಾಪಿಟಲ್ ಕೊಡತಕ್ಕದ್ದು ಒಂದು, ಎರಡನೆಯ ಕಾರಣ ಕೆಲವು ವಿಷಯಗಳನ್ನು ನಂಗ್ರಹ ಮಾಡಬೇಕು. ಅದಕ್ಕಾಗಿ ಕೆಲವು ಇಕ್ವಿರ್‌ಮೆಂಟ್ ಕೇಳಿದ್ದೆವು. ಅದನ್ನು ಅವರು ಕೊಟ್ಟಿಲ್ಲ. 10 ಸಾವಿರ ರೂಪಾಯಿಗಳ ಒಳಗಡೆ ಇದ್ದರೆ ಇಂಡಸ್ಟ್ರೀ ಡಿಪಾರ್ಟ್‌ಮೆಂಟಿನವರೇ ಸಾಲವನ್ನು ಕೊಡುತ್ತಾರೆ. 10 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಇದ್ದರೆ ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್ನಿಗೆ ರೆಫರ್ ಮಾಡುತ್ತಾರೆ. ಈ ಕಾರಣಗಳಿಂದ ಆ ಕೇಸುಗಳನ್ನು ಡಿಸ್‌ಪೋಸ್ ಮಾಡಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಈಗ 6 ಜನಗಳಿಗೆ ಹಣವನ್ನು ಮಂಜೂರು ಮಾಡಿದ್ದೀರಿ. ಅದರಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಅರ್ಜಿಗಳಿಗೂ ಮಾನ್ಯತೆ ಕೊಟ್ಟಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಎಲ್ಲಾ ವಿಷಯಗಳನ್ನೂ ಗಣನೆಗೆ ತೆಗೆದುಕೊಂಡು ಸಾಲವನ್ನು ಮಂಜೂರು ಮಾಡಿರುವುದು.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ 6 ಜನಗಳಿಗೆ ಸಾಲವನ್ನು ಮಂಜೂರು ಮಾಡಿದ್ದೇವೆ ಎಂದು ಹೇಳಿದ್ದೀರಿ. ಆ 6 ಜನಗಳ ಹೆಸರನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕೆ. ಮಲ್ಲಪ್ಪ.—ಹೆಸರುಗಳನ್ನು ತಮ್ಮ ಅಪ್ಪಣೆಯಾದರೆ ಹೇಳುತ್ತೇನೆ.—

	ರೂಪಾಯಿಗಳು
(1) ಶಂಕರಪ್ಪ ಬನಪ್ಪ ಅಂಬಳಿ ...	3000
(2) ಮಲ್ಲಪ್ಪ ತಿಪ್ಪಣ್ಣಪ್ಪ ನಟ್ಟ ...	10,000
(3) ಗೋವಿಂದಪ್ಪ ವಿಠೋಬ ಕೊಪಾರ್ಡೆ	10,000
(4) ವೀರಯ್ಯ ಶಿವಲಿಂಗಯ್ಯ ಶಾಲಿಮಠ್	15,000
(5) ರಾಜಪುಟ ಹನುಮಾ ...	25,000
(6) ಸಾಂಬ್ರಾಣಿ ; ಧಾರವಾಡ ...	60,000

ಶ್ರೀ ಎಂ. ವಿ. ಶೆಟ್ಟಿ.—ಈ ನಾಲ್ಕು ಜಿಲ್ಲೆಗಳಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಕೊಟ್ಟಿರುವ ಸಾಲಗಳ ಸಂಖ್ಯೆ ಕೇವಲ 6. ಅದರಲ್ಲೂ ಕೂಡ ಬಿಜಾಪುರಕ್ಕೇ ಹೆಚ್ಚಿಗೆ ಹೋಗಿದೆ. ಉಳಿದ ಜಿಲ್ಲೆಗಳಿಗೆ ಕೊಡುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—10,000 ರೂಪಾಯಿಗಳವರೆಗೂ ಸಾಲಗಳನ್ನು ಕೊಡುವುದಕ್ಕೆ ಇಂಡಸ್ಟ್ರಿಯಲ್ ಟೆಕ್ನಿಕಲ್ ಕಾರ್ಪೊರೇಷನ್ನಿಗೆ ಅಧಿಕಾರವಿದೆ. ಅವರು ಕೊಡಬಹುದು. ನಮಗೆ ಬಂದಿರುವ ಅರ್ಜಿಗಳಲ್ಲಿ ಕೆಲವಕ್ಕೆ ವಿವರಣೆಗಳು ಸಾಕಷ್ಟು ಒದಗಿಸಿರಲಿಲ್ಲವೆಂದು ಕೊಡಲಿಲ್ಲ ; ಇನ್ನು ಕೆಲವಕ್ಕೆ ಅವು ಹಣವನ್ನು Working expense ಗಳಿಗೆ ಉಪಯೋಗಿಸುತ್ತೇವೆಂದು ಹೇಳಿದ್ದರಿಂದ ಕೊಡಲಿಲ್ಲ.

ಶ್ರೀ ಜಿ. ಎಲ್. ಕಟಾಡಿ.—ಈಗ 6 ಜನರಿಗೆ ಸಾಲ ಕೊಟ್ಟಿದೆಯೆಂದು ಹೇಳಿದ್ದೀರಲ್ಲಾ, ಇವೂ ಕೂಡ ಆ ಜನರು ಮುಂಬೈ ರಾಜ್ಯದಲ್ಲಿದ್ದಾಗ apply ಮಾಡಿ ಪಡೆದದ್ದಲ್ಲವೇ ? ಇಲ್ಲಿ ಬಂದಮೇಲೆ ಒಂದನೂ ತಾವು ಕೊಟ್ಟಿಲ್ಲ ಅಲ್ಲವೇ ?

ಶ್ರೀ ಕೆ. ಮಲ್ಲಪ್ಪ.—1958 ರಿಂದೀಚೆಗೆ ಕೊಟ್ಟಿದೆಯೆಂದು ತಿಳಿಸಿದೆ.

Sri GANJI VEERAPPA.—While taking security for loan, is there any rule that Land should not be taken as security ?

Sri K. MALLAPPA.—Adequate security should be given for the loan.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ, ನೀವು ಕೊಟ್ಟಿರುವ ಆರು ಸಾಲಗಳಲ್ಲಿ ಒಂದು ಕ್ಷೇತ್ರಕ್ಕೇ ನಾಲ್ಕು ಕೊಡಲ್ಪಟ್ಟಿವೆ. ಎರಡು ಸಾಲಗಳು ಮಾತ್ರ ಬೇರೆ ಕಡೆಗಳಿಗೆ ಕೊಡಲ್ಪಟ್ಟಿದೆ. ಹೀಗಾಗಿ ಈ ಸಾಲಗಳನ್ನು ಕೊಡುವುದರಲ್ಲಿ ನೀವೇನು ಉದ್ದೇಶವಿಟ್ಟುಕೊಂಡಿದ್ದೀರೋ ಅದು ಸಾರ್ಥಕವಾಗುವುದಿಲ್ಲವಲ್ಲವೇ ? Even in Bijapur District ? ಜಮಖಂಡಿಯಲ್ಲೇ ನಾಲ್ಕು ಕೊಟ್ಟಿದೆ ?

ಶ್ರೀ ಕೆ. ಮಲ್ಲಪ್ಪ.—ಧಾರವಾಡದಲ್ಲಿ ಒಂದೇ ಕೇಸಿಗೆ 60,000 ರೂಪಾಯಿ ಕೊಟ್ಟಿದೆ. ಬೇರೆ ಕಡೆ ಕೊಟ್ಟಿರುವ ಮೂರನ್ನೂ ಕೂಡಿದರೂ ಅಷ್ಟಾಗುವುದಿಲ್ಲ.

ಶ್ರೀ ಜಿ. ವಿ. ಗೌಡ.—ಈ 4 ಕೇಸುಗಳಲ್ಲಿ, ಯಾವ ಉದ್ದೇಶಕ್ಕಾಗಿ ಸಾಲ ಕೊಟ್ಟಿದ್ದೀರೋ ಆ ಉದ್ದೇಶ ಸಾರ್ಥಕವಾಗಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಆಗಿಲ್ಲವೆಂದು ವರ್ತಮಾನ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ಇಲ್ಲಿ 60,000 ರೂಪಾಯಿಗಳನ್ನು ಕೊಟ್ಟಿದ್ದೀರಲ್ಲಾ ಅದಕ್ಕೆ ಏನು security ಕೊಟ್ಟಿದ್ದೀರಾ ? ವಿವರ ಹೇಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸಾಕಷ್ಟು ಕೊಟ್ಟಿದ್ದಾರೆ. ಸೆಕ್ಯೂರಿಟಿ ಏನೆಂಬುದನ್ನು ಅಪೇಕ್ಷೆಪಟ್ಟರೆ ತರಿಸಿ ಕೊಡುತ್ತೇನೆ.

Relief given to the people who were affected due to the Floods in Kapila River in Nanjangud Taluk and Town.

*Q.—552. Sri N. RACHAIAH (Nanjangud).—

Will the Government be pleased to state :—

the details of relief, etc., given by them to the people who were affected due to the floods in the Kapila river in 1961 in Nanjangud Taluk and in Nanjangud Town ?

*A.—Sri M. V. KRISHNAPPA (Minister for Revenue).—

The appended statement contains the required information.

(SRI M. V. KRISHNAPPA)

STATE

Sufferers in Flood Havocs in

Sl. No.	Name of the village	No. of familes who lost houses	No. of persons involved	Esti-mated loss	Relief afforded By Government				
					Cash	Building materials		*Ex-gratia* grant	Wells
						Cash	Kind		
1	2	3	4	5	6	7		8	9
1	Nanjangud Town ..	94	538	24,400	2,020	..	..	..	..
	Total ..	94	538	24,400	2,020	..	..	..	..
2	Bokkahalli ..	94	348	5,330	2,200	935	7,064	1,725	867-50
3	Hosakote Mole ..	64	392	24,350	1,570	3,395	5,640	..	1096-00
4	Alathur Mole ..	28	132	7,550	545	..	..	..	..
5	Hejjige ..	7	29	810	175	..	..	..	..
6	Thoramavu ..	2	11	225	35	..	..	100	..
7	Kullankanahundi ..	3	17	960	75	..	..	..	..
8	Hullahally ..	10	72	..	..	..	..	..	..
9	Uppaligarahundi (Immavu). ..	..	428	..	..	..	..	..	..
10	Nagarle ..	..	..	..	..	..	..	950	..
	Total ..	208	1429	39,225	4,600	4330	12,704	2,775	1963-50
	Grand Total ..	302	1967	63,625	6,620	4330	12,704	2,775	1963-50

Notes.—Other relief measures afforded to the sufferers in flood havocs.—

1. Donation of Rs. 500 from Raw Silk Merchants' Association, Bangalore, has been distributed to the victims of Alathur Mole, Hosakote Mole and Bokkahalli Villages.

2. 42-93 3/4 seers of seed paddy has been issued to 146 persons, *i.e.*, agriculturists

MENT.

Nanjangud taluk up to 21-7-1962.

both in cash and kind

Agency			By non- Government Agency				
Land acquisition cost	Total of Cols. 6 to 9	Town Municipal Council, Nanjangud	Village Panchayet (cash equivalent to Jola distribution).	Taluk Board Nanjangud.	Red Cross Society	Khadi and Village Industries Board	Public donation
10	11	12	13	14	15	16	17
..	2020-00	1,000	..	..	21-50	..	1,000
..	2020-00	1,000	..	..	21-50	..	1,000
11630	24421-50	..	171-60	31-60	272-60	2,25	..
6421	1822-00	..	156-34	156-34	191-00	..	..
..	545-00	..	73-42	73-42	141-50	..	500
..	174-00	..	..	..	..	..	..
..	135-00	..	..	85-05	21-00	..	..
..	75-00	..	..	106-05	21-00	..	..
..	..	..	..	..	..	..	..
..	..	..	..	..	..	..	..
..	959-00	..	..	..	..	..	..
18051	44432-50	..	401-36	452-46	647-10	2,250	500
18051	46452-50	1,000	401-36	452-46	668-60	2,250	1,500

3. The Indian Red Cross Society Authorities have distribiuted dresses to the flood victims in Hosakote-Mole, Alathur Mole and Bokkahalli village.

4. 11 quintal rice received from Government of Madhya Pradesh was distributed among the victims of Bokkahalli and Hoskote Villages.

5. Interest-free loan of Rs. 77,395-00 has been sanctioned to 422 flood victims.

ಶ್ರೀ ಎಚ್. ರಾಚಯ್ಯ.—ನಂಜನಗೂಡು ತಾಲ್ಲೂಕಿನಲ್ಲಿ ಮತ್ತು ಟೌನಿನಲ್ಲಿ 1961 ನೆಯ ಇಸವಿಯಲ್ಲಿ ಪ್ರವಾಹದಿಂದ ತೊಂದರೆಗೊಳಗಾದವರಿಗೆ ಕೊಡಲಾಗಿದ್ದ ಪರಿಹಾರವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ನಂಜನಗೂಡು ತಾಲ್ಲೂಕಿನಲ್ಲಿ ಸುಮಾರು 302 ಮನೆಗಳು ನಷ್ಟವಾಗಿದ್ದವು. ಅವರಿಗೆ ಮನೆ ಕಟ್ಟುವುದಕ್ಕೆ ಸ್ಥೆಟುಗಳನ್ನು ಕೊಡಿಸಿದುದರ ಜೊತೆಗೆ 6,000 ರೂಪಾಯಿಗಳ cash grant ಕೊಟ್ಟಿದೆ. 4,000 ರೂಪಾಯಿಗಳ ಮರಮುಟ್ಟುಗಳನ್ನು ಹಂಚಿದೆ. ದಾನವಾಗಿ 12,000 ರೂಪಾಯಿಗಳನ್ನು, 72,000 ರೂಪಾಯಿಗಳ interst free loan ಗಳನ್ನು ಕೊಟ್ಟಿದೆ.

ಶ್ರೀ ಎಚ್. ರಾಚಯ್ಯ.—ನಂಜನಗೂಡು ತಾಲ್ಲೂಕಿನಲ್ಲಿ 94 ಮನೆಗಳು ಹೋಗಿವೆಯೆಂದು ಹೇಳಿದ್ದೀರಿ. ನಾನು ತಿಳಿದಮಟ್ಟಿಗೆ 124 ಮನೆಗಳು ಪೂರ್ತಾ ಬಿದ್ದುಹೋಗಿವೆ. 30 ಮನೆಗಳು ಅರ್ಧಮರ್ಧ ಬಿದ್ದಿವೆ. ಹೀಗಿರುವಲ್ಲಿ ನೀವು ಸ್ಥೆಟುಗಳನ್ನು ಎಲ್ಲರಿಗೂ ಕೊಟ್ಟಿಲ್ಲ. ಬೊಕ್ಕಳ್ಳಿ ಗ್ರಾಮದಲ್ಲಿ 94 ಮನೆಗಳು ಹೋಗಿದ್ದರೂ ಪರಿವಾರದವರಿಗೆ ಯಾರಿಗೂ ಕೊಟ್ಟಿಲ್ಲ. ಹಲ್ಲೇನಳ್ಳಿಯಲ್ಲಿ 13 ಮನೆಗಳಿಗೆ ಮಾತ್ರ ಸಹಾಯ ಮಾಡಿದೆ. ಹೀಗೆ ಅಲ್ಲಿನ ಜನರಿಗೆ ಯಾವ ರೀತಿಯಲ್ಲೂ ಅನುಕೂಲವಾಗಿಲ್ಲವೆಂಬುದು ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರವಾಹ ಬಂದಾಗ ಸ್ಥಳೀಯ ಅಧಿಕಾರಿಗಳು ಲೆಕ್ಕ ತೆಗೆದು ಕಳುಹಿಸುತ್ತಾರೆ. ಅದರ ಪ್ರಕಾರ ಹತ್ತು ಗ್ರಾಮಗಳಲ್ಲಿ ಇಂತಿಂಥ ರೀತಿಯಲ್ಲಿ ನಷ್ಟವಾಗಿದೆಯೆಂದು ತಿಳಿಸಿದ್ದಾರೆ. ಬೊಕ್ಕಳ್ಳಿಯಲ್ಲಿ 94, ಹೊಸ್ಕೋಟೆಯಲ್ಲಿ 64, ಹೆಜ್ಜಿಗೆಯಲ್ಲಿ 7—ಈ ರೀತಿಯಾಗಿ ಲೆಕ್ಕ ಕೊಟ್ಟಿದ್ದಾರೆ. ಅವರು ಲೆಕ್ಕ ಕೊಟ್ಟಾದ ಮೇಲೆ ಏನಾದರೂ ಆಗಿದ್ದರೆ ನಮ್ಮ ಗಮನಕ್ಕೆ ಬಂದಿಲ್ಲ. ಇಲ್ಲಿ ತಿಳಿಸಿರುವ ಪ್ರಕಾರ 208 ಮನೆಗಳವರಿಗೆ ಮರಮುಟ್ಟುಗಳನ್ನೂ ರೂಲ್ಸ್ ಪ್ರಕಾರ, ಪೂರ್ತಿ ಮನೆ ಹೋಗಿದ್ದರೆ cash grant ಆಗಿ 300 ರೂಪಾಯಿಗಳನ್ನೂ ಕೊಡುತ್ತೇವೆ. ಮಿಕ್ಕ ಸಂದರ್ಭಗಳಲ್ಲಿ ಮರಮುಟ್ಟುಗಳನ್ನೋ ಅಥವಾ cash grant ನ್ನೋ ತೆಗೆದುಕೊಳ್ಳುತ್ತಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—8, 9, 10 ನೆಯ ಐಟಂಗಳ ಸಂಬಂದದಲ್ಲಿ Building Materials ಆಗಲಿ,cash grant ಗಳನ್ನಾಗಲೀ ಕೊಟ್ಟಿರುವುದನ್ನು ತಿಳಿಸಿಲ್ಲ. ಹುಲ್ಲಳ್ಳಿ ಮೋಳೆಮಾವತ್ತೂರು ಗ್ರಾಮಗಳಿಗೆ ಮಾತ್ರ ಕೊಟ್ಟಿದೆ. ಅಂದರೆ ಬಾಕಿ ಊರುಗಳವರಿಗೆ ಏನೂ ಕೊಟ್ಟಿಲ್ಲವೆಂದು ಭಾವಿಸೋಣವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—Estimated loss ಗೊತ್ತಾಗಿಲ್ಲ; ಆದ್ದರಿಂದ ಕೊಟ್ಟಿಲ್ಲ; ಅಷ್ಟೆ.

ಶ್ರೀ ಡಿ. ಎಂ. ಸಿದ್ದಯ್ಯ.—ಹೀಗೆ ಎಷ್ಟೋ ಜನರು ನೊಂದವರಿಗೆ ಅವರ ನಷ್ಟವನ್ನು ನೋಡಿ ಪರಿಹಾರ ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟೇ ನಷ್ಟವಾದರೂ ಸರ್ಕಾರದವರು ಕೊಡುವುದು 300 ರೂಪಾಯಿಗಳು ಮಾತ್ರ. ರೂಲ್ಸ್ ಇರುವುದೇ ಅಷ್ಟು.

ಶ್ರೀ ಜಿ. ವಿ. ಗೌಡ.—ರೂಲ್ಸ್ ಗೊತ್ತಿದೆ. ಇಲ್ಲಿ ತಾವು ಹೇಳಿರುವ ಎಲ್ಲ ಕುಟುಂಬದವರಿಗೂ ಮನೆ ಕಟ್ಟುವುದಕ್ಕೆ ಮರಮುಟ್ಟುಗಳನ್ನು ಕೊಟ್ಟಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆಗಲೇ ಹೇಳಿದೆ. ಸ್ಥೆಟುಗಳನ್ನೂ, ದಾನವಾಗಿ ಸ್ವಲ್ಪ ಹಣವನ್ನೂ ಕೊಟ್ಟಿದೆಯೆಂದು ತಿಳಿಸಿದ್ದೇನೆ. 422 ಸಂದರ್ಭಗಳಲ್ಲಿ ಸುಮಾರು 76,000 ರೂಪಾಯಿಗಳಷ್ಟು interest free loans ಕೊಟ್ಟಿದೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ತಾವು ಹೇಳಿರುವ ರಿಲೀಫ್ ಇಲ್ಲಿ ಷೆಡ್ಯೂಲಿನಲ್ಲಿ ಕೊಟ್ಟಿರುವ ಹಳ್ಳಿಗಳ ಪೈಕಿ, 2-3 ಹಳ್ಳಿಗಳವರಿಗೆ ಮಾತ್ರ ತಲಪಿದೆ. ಬಾಕಿಯವರಿಗೆ ತಲಪಿಲ್ಲವೆಂಬುದು ಇಲ್ಲಿ ಸ್ಪಷ್ಟವಾಗಿದೆ. ಬಾಕಿಯವರಿಗೆ ಏನು ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಪರಿಶಿಷ್ಟವನ್ನು ನೋಡಿದರೆ ಗೊತ್ತಾಗುತ್ತದೆ. 7 ಗ್ರಾಮಗಳ ವಿಷಯದಲ್ಲಿ ವಿವರಗಳನ್ನು ನರಿಯಾಗಿ ಕೊಟ್ಟಿದೆ. ಇನ್ನು ಮೂರು ಗ್ರಾಮಗಳಲ್ಲಿ 10 ಮನೆಗಳು ಮಾತ್ರ ಹೋಗಿತ್ತು.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—Cash ಮತ್ತು kind ಎಂದು ಎರಡು ಕಲಮುಗಳನ್ನು ತೋರಿಸಿದ್ದೀರಿ. ಆಲತ್ತೂರು, ಹೆಜ್ಜಿಗೆ ಮುಂತಾದ ಹಳ್ಳಿಗಳವರಿಗೆ ಇಂಥ ಯಾವ ಸೌಲಭ್ಯಗಳೂ ಕೊಟ್ಟಿಲ್ಲವೆಂದು ಅರ್ಥವಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು cash item ನ್ನು ನೋಡಿ. ಆಲತ್ತೂರ್, ಮೋಳೆಮಾವುತೋರಂ ಮುಂತಾದ ಹಳ್ಳಿಗಳವರಿಗೆ ಸಹಾಯ ಮಾಡಿದೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—Building Materials ಕೊಟ್ಟಿಲ್ಲವೆಂದು ನಾನು ಹೇಳಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಹಳ್ಳಿಯವರು ಸಾಮಾನ್ಯವಾಗಿ ಕೇಳಿರುತ್ತಾರೆ; ಅವರಿಗೆ ಕೊಡುತ್ತಾರೆ.

ಶ್ರೀ ಎಚ್. ರಾಚಯ್ಯ.—ನಂಜನಗೂಡು ತಾಲ್ಲೂಕಿನಲ್ಲಿ 124 ಮನೆಗಳೂ ಪೂರ್ತಾ ಬಿದ್ದುಹೋಗಿವೆ. 34 ಮನೆಗಳು ಅರ್ಧ ಹೋಗಿವೆ. ತಾವು 94 ಎಂದು ಉತ್ತರ ಕೊಟ್ಟಿದ್ದೀರಿ. ಕಾಂಗ್ರೆಸ್ ಅಧ್ಯಕ್ಷರೂ, ಕಾಂಗ್ರೆಸ್ ಮಂತ್ರಿಗಳೂ ಎಲ್ಲರೂ ಬಂದು ಖುದ್ದು ನೋಡಿದ್ದಾರೆ. ಈಗ ನೀವು 94 ಮನೆಗಳವರಿಗೆ ಮಾತ್ರ ಕೊಟ್ಟಿದ್ದರೆ ಮಿಕ್ಕವರು ಎಲ್ಲಿ ಹೋಗಬೇಕೆನ್ನುತ್ತೀರಿ ? ಮೋಳೆಹಳ್ಳಿಯ ವಿಚಾರ ತೆಗೆದುಕೊಂಡರೆ ಅಲ್ಲಿ ಒಂದು ಕೋಮಿನವರಿಗೆ ಮಾತ್ರ ಕೊಟ್ಟಿದ್ದಾರೆ. ಬೊಕ್ಕಳ್ಳಿಯಲ್ಲೂ ಕೂಡ ಹರಿಜನರಿಗೆ ಮಾತ್ರ ಸಹಾಯ ಮಾಡಿದ್ದಾರೆ. ಪರಿವಾರದವರಿಗೆ ಏನೂ ಕೊಟ್ಟಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನಂಜನಗೂಡಿಗೆ ನಾನೂ ಬಂದಿದ್ದೆ. ತಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂದಿದ್ದೆ, ಆದರೆ ಅಲ್ಲಿಗೆ ಬರುವುದು ತಡವಾದ್ದರಿಂದ ಆಗಲಿಲ್ಲ. ಸ್ಥೆಟುಗಳನ್ನು ಕೊಡುವ ಉದ್ದೇಶದಿಂದ 7½ ಎಕರೆಗಳನ್ನು ಅಕ್ವೆಸ್ಟಿಯರ್ ಮಾಡಿಕೊಳ್ಳಬೇಕೆಂದಿದೆ; ಇದು ಸ್ವಲ್ಪ ನಿಧಾನವಾಗಿದೆ. ಅಲ್ಲದೆ ಜನರು ನದಿಯ ಪಕ್ಕದಲ್ಲಿ ಹಿಂದೆ ಕಟ್ಟಿಕೊಂಡಿದ್ದವರಾಗಿ ಈಗ ಆ ಜಾಗ ಬಿಟ್ಟು ಬೇರೆ ಕಡೆ ಬರುವುದಕ್ಕೆ ಇಷ್ಟಪಡುತ್ತಿಲ್ಲ. ಸರ್ಕಾರದವರು ಅದೇ ಸ್ಥಳದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಹಣ ಕೊಟ್ಟರೆ ನುಮ್ಮನೆವ್ಯರ್ಥವಾಗುತ್ತದೆಂದು ಹೇಳಿ ಅವರಿಗೆ ಹಣ ಕೊಟ್ಟಿಲ್ಲ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಜನರು ನದಿಯ ದಡವನ್ನು ಬಿಟ್ಟು ಬೇರೆ ಕಡೆ ಮನೆ ಮಾಡಿಕೊಳ್ಳುವುದಕ್ಕೆ ಒಪ್ಪುವುದಿಲ್ಲವೆಂದು ಹೇಳಿ ಜಮೀನು ಅಕ್ವೈರ್ ಮಾಡಿಕೊಳ್ಳದಿರುವುದು ಸರಿಯೇ? ಅಥವಾ ಮುಂಜೆ ಅಕ್ವೈರ್ ಮಾಡಿಕೊಳ್ಳದೇನೆ ಅವರಿಗೆ ಹೋಗಬೇಕೆಂದು ಹೇಳುವುದು ಸರಿಯೋ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಕ್ವೈರ್ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆ. ಬೇಗ ಅಕ್ವೈರ್ ಮಾಡಿಕೊಡುತ್ತೇವೆ.

1-30 P.M.

ಶ್ರೀ ಬಿ. ಎಲ್. ಗೌಡ.—ಪ್ರವಾಹ ಬರುವ ಸಂದರ್ಭದಲ್ಲಿ ಕಷ್ಟನಷ್ಟಗಳಾಗುವುದನ್ನು ಮುಚ್ಚಿಡುತ್ತಾ ಏನೂ ಪರಿಹಾರ ಕೊಡದೇ ಇರುವ ಅಧಿಕಾರಿಗಳಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಂಥ ಅಧಿಕಾರಿಗಳು ನನ್ನಗಮನಕ್ಕೆ ಬಂದಿಲ್ಲ. ಅಲ್ಲದೆ ಹಾಗೆ ಅವರು ಮಾಡಲು ಅವರ ಕೈಯಿಂದೇನೂ ಕೊಡಬೇಕಾಗಿಲ್ಲ. ಆದರೆ ಇದರಲ್ಲಿ ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಕೆಲವರಿಗೆ ನಿಜವಾಗಿಯೂ ನಷ್ಟವಾಗುತ್ತದೆ. ಮತ್ತೆ ಕೆಲವರು ಜೋಪಡಿ ಹಾಕಿಕೊಂಡಿರುತ್ತಾರೆ ಇವರಿಗೇನೂ ಹೆಚ್ಚು ನಷ್ಟವಾಗಿರುವುದಿಲ್ಲ. ಆದರೂ ರಾಭಪಡೆಯುತ್ತಾರೆ. ಆದಕಾರಣ ಎಲ್ಲವನ್ನೂ ಪರಿಶೀಲಿಸಿ ಕೊಡಬೇಕಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಹೊಳೆಯ ಪಕ್ಕದಲ್ಲೂ ಮನೆಗಳನ್ನು ಕಟ್ಟಿಸಿದರೆ ಪುನಃ ಮಳೆಬಂದರೆ ಅವರಿಗೆ ತೊಂದರೆಯಾಗುತ್ತದೆ; ಇದಕ್ಕೇನಾದರೂ ವವಸ್ಥೆ ಮಾಡುತ್ತೀರಾ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾಡುತ್ತೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನಂಜನಗೂಡಿನಲ್ಲಿ 24,400 ರೂಪಾಯಿ ನಷ್ಟವಾಗಿದೆ, ಆದರೂ *ex-gratia* grant ಏನೂ ಕೊಟ್ಟಿಲ್ಲ; ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—2,020 ರೂಪಾಯಿ ನಗದು ಕೊಟ್ಟಿದ್ದಾರೆ, ಒಂದುಸಾವಿರ ಮುನಿಸಿಪಾಲಟಿಯವರು ಕೊಟ್ಟಿದ್ದಾರೆ, ಒಂದು ಸಾವಿರ ರೂಪಾಯಿ ಸಾರ್ವಜನಿಕರು ಕೊಟ್ಟಿದ್ದಾರೆ, ರೆಡ್‌ಕ್ರಾಸ್ ಸಂಸ್ಥೆಯವರುಕೂಡ ಸ್ವಲ್ಪ ಕೊಟ್ಟಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರವಾಹ ಬಂದಾಗ ಮನೆಗಳು ಕೊಚ್ಚಿಕೊಂಡು ಹೋಗುತ್ತವೆಂದು ಹೇಳಿದರು, ಮಳೆ, ಬೆಂಕಿ ಅನಾಹುತ ಬಂದಾಗ ಅದಕ್ಕೆ ಹೆದರದೇ ಇರುವ ಮನೆಗಳನ್ನು ಸರ್ಕಾರ ಕಟ್ಟಿಸುತ್ತಾರೆಯೆ?

ಅಧ್ಯಕ್ಷರು.—ಬೆಂಕಿಯ ಪ್ರಶ್ನೆ ಇಲ್ಲಿ ಬರುವುದಿಲ್ಲ.—

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರವಾಹ ಬಂದರೆ ಹೆದರಬೇಯಿರುವ ಮನೆಗಳನ್ನು ಕಟ್ಟಲು ಪ್ರಯತ್ನ ಮಾಡುತ್ತಾರೆಯೆ?

ಅಧ್ಯಕ್ಷರು.—ನಿಮ್ಮ ಅಭಿಪ್ರಾಯವೇನು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ಲಾಸ್ಟಿಕ್ ಮನೆಗಳನ್ನು ಕಟ್ಟಬಹುದು.

Death of patients in Vani Vilas and Victoria Hospitals at the time of operation.

*Q.—582. Smt. NAGARATHNAMMA HIREMATH (Gandhinagar).—

Will the Government be pleased to state:—

whether they are aware of the deaths, if any, of patients in Vani Vilas and Victoria Hospitals due to tetanus at the time of operation?

*A.—Sri K. NAGAPPA ALVA (Minister for Health).—

No.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಇತ್ತೀಚೆಗೆ ನಿಮಗೆ ಬಂದ ವರದಿಯಲ್ಲಿ ಏನಾದರೂ ಎವರಪಿದ್ದರೆ ಹೇಳುತ್ತೀರಾ?

ಶ್ರೀ ಕೆ. ನಾಗಪ್ಪ ಆಳ್ವ.—ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಟೆಟಾನಸ್ ರೋಗಕ್ಕೆ ಆಪರೇಷ್ಷ ಇಲ್ಲ. ಆದರೆ 12ಜನರಿಗೆ ಆಪರೇಷ್ಷ ಮಾಡಿದಮೇಲೆ ಟೆಟಾನಸ್ ರೋಗದ ಲಕ್ಷಣಗಳು ಕಂಡುಬಂತು. ಇದಕ್ಕೆ ಬೇಕಾದ ಚಿಕಿತ್ಸೆ ನಡೆಸಿದ್ದಾರೆ. ಮೂರು ಜನರು ಸತ್ತಿದ್ದಾರೆ.

ಶ್ರೀ ಜಿ. ವಿ. ಗೌಡ.—ಆಪರೇಷ್ಷ ಸಮಯದಲ್ಲಿ ಟೆಟಾನಸ್ ರೋಗದಿಂದ ಯಾರಾದರೂ ಸತ್ತಿದ್ದಾರೆಯೆ ಎಂದಿದೆ. ಆದರೆ ಇಲ್ಲಿ ಉತ್ತರ ಕೊಟ್ಟಿರುವುದು ಟೆಟಾನಸ್ ಆಪರೇಷ್ಷನಲ್ಲಿ ಯಾರೂ ಸತ್ತಿಲ್ಲ ಎಂದು.

ಶ್ರೀ ಕೆ. ನಾಗಪ್ಪ ಆಳ್ವ.—ಟೆಟಾನಸ್ ಬ್ಯಾಸಿಲ ಎಂಬ ಜರ್ಮ್ಸ್‌ನಿಂದ ಒಂದು ರೋಗ ಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೆಟಾನಸ್ ಎಂದರೇನು?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಒಂದುತರಹ germs ಮನುಷ್ಯನಿಗೆ ಎಲ್ಲಾದರೂ ಗಾಯವಾದರೆ ಅದರ ಮೂಲಕ ಈ ರೋಗ ತಗಲುತ್ತದೆ, ಯಾವ ಸಮಯದಲ್ಲಿ ಇದರ ಲಕ್ಷಣವುಂಟಾಗುತ್ತದೆ, ಈ ರೋಗದಿಂದ ಕೆಟ್ಟ ಪರಿಣಾಮವುಂಟಾಗುತ್ತದೆ ಎಂಬುದನ್ನು ಯಾರಿಗೂ ಹೇಳುವುದಕ್ಕೆ ಬರುವುದಿಲ್ಲ. ತನಿಖೆ ನಡೆಸಿದಮೇಲೆ ಆಪರೇಷ್ಷ ಅಜಾಗರೂಕತೆಯಿಂದ ಯಾವತಪ್ಪೂ ಆಗಲಲ್ಲವೆಂದು ಗೊತ್ತಾಗಿದೆ. ಇದರ ವಿಷಯದಲ್ಲಿ ಬೇಕಾಧ ಕಾರ್ಯಕ್ರಮ ತೆಗೆದು ಕೊಂಡಿದೆ. ಇನ್ನೂ ಇದಕ್ಕೆ ಬೇಕಾದ ಜಾಗರೂಕತೆ ತೆಗೆದುಕೊಳ್ಳಬೇಕೆಂಬ ಕಾರ್ಯಕ್ರಮವಿದೆ. ವಿಷಯವನ್ನು ಅವರಿಗೆ ತಿಳಿಸಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಒಂದು ಥಿಯೇಟರಿನಲ್ಲಿ ಟೆಟಾನಸ್ ಆಪರೇಷ್ಷ ಮಾಡಿದರೆ ಆ ಥಿಯೇಟರನ್ನು ಎಷ್ಟುದಿವಸ ಮುಚ್ಚಿರಬೇಕು?

ಶ್ರೀ ಕೆ. ನಾಗಪ್ಪ ಆಳ್ವ.—ಥಿಯೇಟರನ್ನು ಮುಚ್ಚಿಡ ಬೇಕಾಗಿಲ್ಲ. ಬೇಕಾದ ಜಾಗರೂಕತೆಯನ್ನು ತೆಗೆದು ಕೊಂಡು ಸ್ವಚ್ಛವಾಗಿಡಬೇಕು.

ಶ್ರೀ ಎ. ಕೃಷ್ಣಶೆಟ್ಟಿ.—ರ್ಯಾಬೊರೇಟರಿ ಕ್ರಮವನ್ನು ಏನಾದರೂ ಅನುಸರಿಸಬೇಕಾಗುತ್ತದೆಯೆ?

ಶ್ರೀ ಕೆ. ನಾಗಪ್ಪ ಆಳ್ವ.—ಅದನ್ನೂ ಅನುಸರಿಸುತ್ತಿದ್ದೇವೆ.

Sri N. O. SAMAJI.—(Translated from Marathi) ಈ ರೋಗ ಸಂಪರ್ಕದಿಂದ ಹರಡುತ್ತದೆ, ಎಂದರೆ contagious ಇದು?

Sri K. NAGAPPA ALVA.—It is not contagious.

ಶ್ರೀ ಸಿ. ಆರ್. ರಂಗೇಗೌಡ.—ಮೈಸೂರು ರಾಜ್ಯದ ಆಸ್ಪತ್ರೆಗಳಲ್ಲಿ 'ಅನೀಸ್ತೀಸ್ಟ್'ಗಳು ಒಬ್ಬೊಬ್ಬರೇ ಇದ್ದಾರೆ, ಹೆಚ್ಚುಜನರಿಗೆ ಈ ಶಿಕ್ಷಣ ಕೊಡಲು ಪ್ರಯತ್ನಮಾಡುತ್ತೀರಾ?

Mr. SPEAKER.—Where is it? How does it come in this question? If the Hon'ble Minister for Health has an naswer, he may furnish it.